9

# ಮೀಕಲ

## ಪ್ರೀತಿಯು ಕಹಿಯಾದಾಗ!
## (18:20, 27; 19:11-17)

1 ಸಮುವೇಲ, ಮಾನವನ ಜೀವನದ ಎಲ್ಲಾ ಅನುಭವಗಳ ಕುರಿತು ಮಾತಾಡುತ್ತದೆ. ಈ ಪುಸ್ತಕದಲ್ಲಿ ಒಂದು "ಪ್ರೇಮ ಪ್ರಕರಣ" ಜರಗುತ್ತದೆ. ಇಂದಿನ ಮಾರುಕಟ್ಟೆಯಲ್ಲಿನ ಉತ್ತಮ ಕಾದಂಬರಿಯಲ್ಲಿರಬೇಕಾದ ವಿವರಣೆ ಮತ್ತು ಕತೆ ಈ ಪ್ರೇಮ ಕತೆಯಲ್ಲಿದೆ. ಇಬ್ಬರು ಪ್ರೇಮಿಗಳು, ವಿವಿಧ ವಿರಸಗಳು, ಕುತೂಹಲ ಕೆರಳಿಸುವ ವಿಷಯಗಳು, ಭಾವಾ ನಾತ್ಮಕವಾದ ಉನ್ಮದ ಮತ್ತು ಕೊಳ್ಳಗಳು, ಅಪಾಯ ಇತ್ಯಾದಿ ಈ ಕತೆಯಲ್ಲಿದೆ. ಇದು ಬಹು ಉತ್ತೇಜನೆಯಿಂದ ಓದಬಹುದಾದ ಕತೆ. ಈ ಪ್ರೇಮ ಕತೆಯು ಮುಕ್ತಾಯ ವಾಗುವಾಗ, ತೆರೆ ಎಳೆಯಲ್ಪಡುವಾಗ, ದಂಪತಿಗಳು "ಸಂತೋಷದಿಂದ ಜೀವಿಸಿದರು" ಎಂಬುದಾಗಿ ಅಂತ್ಯವಾಗುವದಿಲ್ಲ. ಇಂಥ ಆನಂದಕರವಾದ ಅಂತ್ಯವಿರಬಹುದಾಗಿತ್ತು, ಆದರೆ "ಪ್ರೀತಿಯು" ತನ್ನ ನ್ಯಾಯವಾದ ಸ್ಥಾನದಲ್ಲಿರಲಿಲ್ಲ ಮತ್ತು ದ್ವೇಷವು ಆಳುವದಕ್ಕೆ ಅವಕಾಶವಾಯಿತು.

ದಾಂಪತ್ಯ ಪ್ರೀತಿಯನ್ನು ತೂರಿಬಿಟ್ಟು ದ್ವೇಷ ಮನೆ ಮಾಡಿಕೊಂಡಿರುವ ವಿಷಾದ ನೀಯ ಸತ್ಯ ಅನೇಕ ವಿವಾಹಗಳಲ್ಲಿ ಕಂಡುಬರುತ್ತದೆ. ಸಂತೋಷದಿಂದ ತುಂಬಿದ ಮನೆಯು ಅನೇಕ ವೇಳೆ, ದ್ವೇಷದಿಂದ ತುಂಬಿದ ಯುದ್ಧ ಭೂಮಿಯಾಗಿದೆ. ಸೊಕ್ರೇ ಟ್‌ಸ್‌ನ ಪತ್ನಿ ಜಾನ್ಟಿಪ್ಪೆಯು, ಬಹು ಕೋಪವುಳ್ಳ ಸ್ತ್ರೀಯಾಗಿದ್ದಳು. ಒಂದು ಸಮಯದಲ್ಲಿ ಅವಳ ರೋಷವು ಪ್ರಕಟಿಸಬಹುದಾದ ಎಲ್ಲಾ ತೆಗಳಿಕೆಯನ್ನು ಅವನ ಮೇಲೆ ಹಾಕಿದಾಗ, ಸೊಕ್ರೇಟೆಸ್ ಹೊರಗೆ ಹೋಗಿ ತನ್ನ ಮನೆಯ ಕಟ್ಟೆಯ ಮೇಲೆ ಕುಳಿತುಕೊಂಡನು. ಅವನ ಶಾಂತ ಮತ್ತು ನಿಶ್ಚಿಂತ ನಡತೆಯು ಅವಳನ್ನು ಇನ್ನೂ ರೇಗಿ ಸಿತು. ತನ್ನ ರೋಷ ದಲ್ಲಿ ಅವಳು ಮೇಲುಪ್ಪರಿಗೆಗೆ ಓಡಿ ಹೋದಳು ಮತ್ತು ಒಂದು ಹೂಜಿ ನೀರನ್ನು ಅವನ ತಲೆಯ ಮೇಲೆ ಸುರಿದಳು. ಅಷ್ಟೊಂದು ಗುಡುಗು ಕೇವಲ ಅಷ್ಟೇ ಮಳೆಯನ್ನು ಹೊರಡಿಸಬಹುದೆಂದು ಹೇಳಿ ಸೊಕ್ರೇಟೆಸ್ ನಕ್ಕು ಬಿಟ್ಟನು!

ನಾವು ಲಕ್ಷ್ಯಕೊಡಬೇಕಾದ ಪ್ರಾಮುಖ್ಯವಾದ ಮತ್ತು ಅಪ್ರಿಯವಾದ ಒಂದು ಪಾಠವನ್ನು ಈ ಎರಡು ಪ್ರೇಮಿಗಳು - ಇಷಯನ ಮಗನಾದ ದಾವೀದ ಮತ್ತು ಸೌಲನ ಮಗಳಾದ ಮೀ ಕಲಳು ಕಲಿಸುತ್ತಾರೆ.

### ವಿವಾಹವು

ಗೋಲ್ಯಾತನು ಕೊಲ್ಲಲ್ಪಟ್ಟ ಸ್ವಲ್ಪ ಸಮಯದಲ್ಲಿಯೇ ಅವರು ಬೇಟಿಯಾದರು. ದೈತ್ಯನನ್ನು ಕೊಂದರೆ ಸೌಲನ ಮಗಳಾದ ಮೇರಬಳನ್ನು ಮದುವೆ ಮಾಡಿಕೊಡುವದಾಗಿ ವಾಗ್ದಾನ ಮಾಡಲ್ಪಟ್ಟಿತ್ತು, ಆದರೆ ಸೌಲನ ಹೊಟ್ಟೆ ಕಿಚ್ಚು, ಭಯ, ಮತ್ತು ಇತರ ದುಷ್ಟತನ ಗಳು ತಾನು ಮಾಡಿದ ವಾಗ್ದಾನವನ್ನು ಮುರಿಯುವಂತೆ ನಡೆಸಿದವು. ಮೇರಬಳನ್ನು ಇನ್ನೊಬ್ಬನಿಗೆ ಮದುವೆ ಮಾಡಿದರು. ತನ್ನ ಚಿಕ್ಕ ಮಗಳು ದಾವೀದನನ್ನು ಪ್ರೀತಿಸುತ್ತಾ ಳೆಂದು ಸೌಲನಿಗೆ ತಿಳಿದಾಗ, ಅವನು ದಾವೀದನನ್ನು ಕೊಲ್ಲಿಸಬೇಕೆಂದು ಅವಕಾಶ ನೋಡಿದನು (18:20-25).

ಮೀಕಲಳನ್ನು ತನ್ನ ಹೆಂಡತಿಯಾಗಿ ಪಡೆಯುವದಕ್ಕೆ ದಾವೀದನು ಏನನ್ನೂ ಮಾಡಲು ಸಿದ್ಧನಾಗಿದ್ದನು (18:27). ಅವನು ಧೀರನಾಗಿ ಅವಳನ್ನು ಪಡೆದನು ಮತ್ತು "ವಿವಾಹವು ಸ್ವರ್ಗದಲ್ಲಿ ನಿರ್ಮಾಣಗೊಳ್ಳುತ್ತವೆ" ಎಂದು ಇಸ್ರಾಯೇಲಿನ ಸುದ್ದಿ ಮಾತಿನಂತೆ ಅವರಿಬ್ಬರೂ ತಮ್ಮ ಜೀವನ ಪ್ರಾರಂಭಿಸಿದರು!

ಸೌಲನಿಂದ ದಾವೀದನಿಗಾದ ಹಿಂಸೆಗೆ ಅವರು ಪ್ರತಿಕ್ರಿಯೆ ವ್ಯಕ್ತಪಡಿಸಿದ್ದು ಅವರ ಪ್ರೀತಿಗೆ ಸಾಕ್ಷಿಯಾಗಿತ್ತು (19:11-17). ಸೌಲನ ಕ್ರೌರ್ಯವು ಮನಃಸಾಕ್ಷಿಯ ಎಲ್ಲಾ ಬಂಧನಗಳನ್ನು ಮುರಿದುಬಿಟ್ಟಿತ್ತು, ಮತ್ತು ಅರಸನು ದಾವೀದನನ್ನು ದಂಡನೆಗೊಳಪಡಿಸಿ ಅವನ ಮರಣವನ್ನು ಸಾರ್ವಜನಿಕವಾಗಿ ಯೋಜಿಸಿದನು. ದಾವೀದನನ್ನು ಸ್ವತಃ ಕೊಲ್ಲುವದಕ್ಕೆ ಆಗದೇ (18:10), ಸೌಲನು ದಾವೀದನನ್ನು ಹಿಡಿಯುವದಕ್ಕೆ ಹೊಂಚುಹಾಕಿದನು. ತನ್ನ ತಂದೆಯ ಕುತಂತ್ರದ ಕುರಿತು ಮೀಕಲಳಿಗೆ ತಿಳಿದು ಬಂತು ಮತ್ತು ಅವಳು ತನ್ನ ಪೂಜೆಯ ಗೊಂಬೆಗೆ ಕಂಬಳಿಯನ್ನು ಹೊದಿಸಿ, ದಾವೀದನು ಅಸ್ವಸ್ತನಾಗಿದ್ದಾನೆಂದು ಹೇಳಿ ಅವನು ತಪ್ಪಿಸಿಕೊಳ್ಳುವಂತೆ ಮಾಡಿದಳು. ಅವಳ ಮೋಸವು ತಿಳಿದು ಬಂದಾಗ, ಸೌಲನಿಗೆ ಸುಳ್ಳು ಹೇಳಿ ತನ್ನನ್ನು ರಕ್ಷಿಸಿಕೊಂಡಳು. ಕೀರ್ತನೆ 59ರಲ್ಲಿ ದಾವೀದನು ತಾನು ತಪ್ಪಿಸಿಕೊಂಡ ವಿವರಣೆಯನ್ನು ನಮೂದಿಸಿದ್ದಾನೆ. ದಾವೀದನ ಗಡಿಪಾರು ಇಲ್ಲಿಂದ ಪ್ರಾರಂಭವಾಯಿತು. ಮೀಕಲಳನ್ನು ದಾವೀದನಿಂದ ಬೇರ್ಪಡಿಸಿ ಇನ್ನೊಬ್ಬನೊಂದಿಗೆ ಮದುವೆ ಮಾಡಿದರು (2 ಸಮುವೇಲ 3:13-16). ಸುಮಾರು ಎಂಟರಿಂದ ಹತ್ತು ವರ್ಷಗಳವರೆಗೆ ಈ ಪ್ರೇಮಿಗಳು ಬೇರ್ಪಟ್ಟರು.

ಸೌಲನ ಮರಣಾನಂತರ ದಾವೀದ ಮತ್ತು ಮೀಕಲಳು ಒಂದಾದರು. ಈ ಪುನರ್ಮಿಲನವು ತೀಕ್ಷಣವಾಗಿ ಅವರ ಮಧ್ಯದಲ್ಲಿ ದ್ವೇಷವನ್ನು ಕೇಂದ್ರೀಕರಿಸಿತು. ಅದು ನಂತರ ಅವರನ್ನು ಪುನಃ ಬೇರ್ಪಡಿಸಿತು. ಸೌಲನ ಮರಣದ ನಂತರ, ಅವನ ಸಿಂಹಾಸನವು ಅವನ ಮಗನಿಗೆ ಹೋಯಿತು. ಆದರೆ ಸೌಲನು ಆನಂದಿಸಿದ ಐಕ್ಯತೆ ಮತ್ತು ರಾಜನಿಷ್ಠೆಯು ಇರಲಿಲ್ಲ (2 ಸಮುವೇಲ 3:1). ಕೊನೆಗೆ ಮಾತುಕತೆಗಳು ಯುದ್ಧ ಮಾಡುತ್ತಿದ್ದ ಎರಡೂ ಪಡೆಗಳನ್ನು ಒಂದು ಮಾಡಿತು (2 ಸಮುವೇಲ 2:12f.).

ದಾವೀದನ ಮಾತುಕತೆಗಳಲ್ಲಿ ಪ್ರಾಮುಖ್ಯವಾದ ಶರತ್ತು - ಮೀಕಲಳು ತಕ್ಷಣವೇ ಅವನೊಂದಿಗೆ ಒಂದಾಗಬೇಕು. ದಾವೀದನು ಹೇಳಿದನು, "ನಿನ್ನ ಸಂಗಡ ಒಡಂಬಡಿಕೆ ಮಾಡಿಕೊಳ್ಳುತ್ತೇನೆ; ಆದರೆ ನೀನು ಒಂದು ಮಾಡಬೇಕು. ನನ್ನನ್ನು ನೋಡುವದಕ್ಕೆ ಬರುವಾಗ ಸೌಲನ ಮಗಳಾದ ಮೀಕಲಳನ್ನು ಕರಕೊಂಡು ಬರ ಬೇಕು; ಹಾಗೆ ಕರಕೊಂಡು ಬಾರದಿದ್ದರೆ, ನೀನು ನನ್ನ ಮೋರೆಯನ್ನು ನೋಡ ಕೂಡದು, ..." (2 ಸಮುವೇಲ 3:13). ಅವನ "ಮೊದಲ ಪ್ರೀತಿಯ" ನೆನಪುಗಳು ಪ್ರೀಯವಾಗಿ ಇಟ್ಟುಕೊಂಡಿದ್ದರಲ್ಲಿ ಸಂಶಯವಿಲ್ಲ. ಈ ಪುನರ್ಮಿಲನವು ದಾವೀದನನ್ನು ಅರಸನ ಸ್ಥಾನಕ್ಕೆ ಪುನಃ ಸ್ಥಾಪಿಸುತ್ತಿತ್ತು, ಯಾಕೆಂದರೆ ಅವನ ಹೆಂಡತಿಯು ಅರಸನ ಮಗಳಾಗಿದ್ದಳು. ಹೆಬ್ರೋನಿನಲ್ಲಿ ಬಹುಕಾಲದಿಂದ ಕಾಯುತ್ತಿದ್ದ ಪುನರ್ಮಿಲನವು ಹತ್ತು ವರ್ಷಗಳ ಬೇರ್ಪಡುವಿಕೆಯ ತರುವಾಯ ಆಯಿತು. ಮೀಕಲಳಿಗೋಸ್ಕರ ಕಾಯುತ್ತಿದ್ದ ದಾವೀದನ ಹೃದಯದ ವೇಗದ ಬಡಿತವನ್ನು ನೀವು ಊಹಿಸಬಹುದೋ? ಆತನು ಅಪಾಯದಲ್ಲಿದ್ದರೂ, ತನ್ನನ್ನು ಉಳಿಸಿದ ಸ್ತ್ರೀಯೊಂದಿಗೆ ಇಲ್ಲಿ ಆತನು ತನ್ನ ಮೊದಲಿನ ಪ್ರೀತಿಯೊಂದಿಗೆ ಪುರ್ನಮಿಲನವಾದನು. ಅವಳೊಂದಿಗೆ ಆದಷ್ಟು ಬೇಗನೆ ಇರುವದಕ್ಕೆ ಬಯಸಿದ್ದರಲ್ಲಿ ಆಶ್ಚರ್ಯವಿಲ್ಲ! ಆದರೆ ವಿಷಯಗಳು ಬೇರೆಯಾಗಿದ್ದವು.

ಹತ್ತು ವರ್ಷಗಳ ಹಿಂದೆ ಅಲ್ಪವೆಂದು ತೋರಿದ ಭಿನ್ನಾಭಿಪ್ರಾಯಗಳು ಈಗ ಬೆಳೆದು ಬಿಟ್ಟಿದ್ದವು. ಅವರಿಬ್ಬರೂ ಒಂದೇ ಆಗಿದ್ದರೂ ಅವರ ಮೌಲ್ಯಗಳು ಹೆಚ್ಚು ಸೀಮಿತಗೊಂಡಿದ್ದವು. ಅವರು "ಬೇಟಿಯಾಗುತ್ತಿದ್ದ" ಕಾಲದಲ್ಲಿ, ವಿವಾಹಕ್ಕೆ ಸಿದ್ಧತೆ ಮಾಡು

ವಾಗ ಮತ್ತು ಮೊದಲ ಕೆಲ ತಿಂಗಳು ಒಟ್ಟಾಗಿ ಜೀವಿಸುವಾಗ ಈ ಭಿನ್ನತೆಗಳು ಪ್ರಾಮುಖ್ಯ ವೆಂದೆಣಿಸಿರಲಿಲ್ಲ. ಆದರೆ ಈ ಭಿನ್ನಾಭಿಪ್ರಾಯಗಳು ಹೆಚ್ಚಾಗಿ ಬೆಳೆದು ಕೊನೆಯಲ್ಲಿ ಇಸ್ರಾಯೇಲಿನ ಹಬ್ಬದ ದಿನದಂದು ಸ್ಫೋಟಗೊಂಡಿತು. ಅವರ ಮಧುರ ಪ್ರೀತಿ ಸತ್ತು ಹೋಗಿತ್ತು ಮತ್ತು ದ್ವೇಷವು ಹುಟ್ಟಿಕೊಂಡಿತ್ತು. "ಪರಲೋಕದಲ್ಲಿ ನಿರ್ಮಾಣಗೊಂಡ ವಿವಾಹದ" ಮುಕ್ತಾಯದ ಮಾತುಗಳು ಬಹು ದುಃಖಕರವಾಗಿವೆ (2 ಸಮುವೇಲ 6:23).

## ದುರಂತ

ಮೀಕಲಳ ಜೀವನದಿಂದ ನಮಗೆ ತಿಳಿದುಬರುವ ವಿಷಯವೇನೆಂದರೆ, ಅವರ ಪ್ರೀತಿ ಮತ್ತು ಪ್ರೇಮದ ಅವನತಿಗೆ ಒಂದು ತಪ್ಪು ಕಾರಣವಾಯಿತು. ಸೈತಾನನಿಗೆ ಒಂದೇ ಒಂದು ತಪ್ಪು ಸಾಕು. ಅವನು ಅದನ್ನು ಬಿರುಕಿನಂತೆ ಉಪಯೋಗಿಸಿ ಪ್ರಳಯವನ್ನು ಕಳುಹಿಸುತ್ತಾನೆ (ಯಾಕೋಬ 2:10).

ಮೀಕಲಳ ಒಂದೇ ತಪ್ಪು ಏನೆಂದರೆ *ಅವಳು ದೇವರನ್ನು ಸರಿಯಾದ ರೀತಿ ಯಿಂದ ಗೌರವಿಸಲಿಲ್ಲ*! ಅವಳ ಬಯಕೆಯು ಸ್ವಪ್ರತಿಷ್ಠೆಗಾಗಿ ಇತ್ತೇ ವಿನಃ ಪರಿಶುದ್ಧತೆಗಾಗಿ ಅಲ್ಲ. ವಿಗ್ರಹಾರಾಧನೆಗಾಗಿ ಇತ್ತೇ ವಿನಃ ನಿಜವಾದ ಆರಾಧನೆಗಾಗಿ ಅಲ್ಲ. ಅವಳು ಸೌಲ ಹತ್ತಿರ ತರಬೇತಿ ಪಡೆದಿದ್ದಳು. ಆ ಕಾಲದಲ್ಲಿ ಜನರು ದೇವರ ಕುರಿತು ಲಕ್ಷ್ಯಕೊಡುತ್ತಿರಲಿಲ್ಲ (1 ಪೂರ್ವಕಾಲ ವೃತ್ತಾಂತ 13:3). ಸಾರ್ವಜನಿಕ ಆರಾಧನೆಯು ಆಲಕ್ಷ್ಯವಾಗಿತ್ತು, ಧಾರ್ಮಿಕ ಉತ್ಸಾಹ ಸತ್ತು ಹೋಗಿತ್ತು. ಮೀಕಲಳಿಗೆ ದೇವರ ಕುರಿತು ತಿಳಿದಿತ್ತು ಆದರೆ ದೇವರನ್ನು ನಿಜವಾಗಿಯೂ "ಅರಿತಿರಲಿಲ್ಲ"! ದೇವರನ್ನು "ಬೊಂಬೆಗೆ" (19:16) ಸಮಾನವಾಗಿ ಇರಿಸಿದಳು. ಅವಳ ಧರ್ಮವು ಅಂಧ ವಿಶ್ವಾಸ, ನಿಯಮ, ಮತ್ತು ತಣ್ಣಗಾದ ಸ್ಥಿತಿಯಿಂದ ಕೂಡಿತ್ತು. ಅವಳು ವಯಸ್ಸಿನಲ್ಲಿ ಬೆಳೆದಂತೆ, ದಾವೀದನ ಭಕ್ತಿಯನ್ನು ಸಹಿಸಲಿಲ್ಲ! ದಾವೀದನಲ್ಲಿ ಅವಳು ಕೇವಲ ಒಬ್ಬ ಧೀರ ಮತ್ತು ಅರಸನನ್ನು ಪ್ರೀತಿಸಿದಳು. ಅವಳು ಯೆಹೋವನ ಕುರಿತು ಲಕ್ಷ್ಯಿಸಲಿಲ್ಲ. ಆದುದರಿಂದ ದಾವೀದನು ಎಲ್ಲಾ ಇಸ್ರಾಯೇಲ್ಯರೊಂದಿಗೆ ಒಂದಾಗಿ ಯೆಹೋವನ ಮುಂದೆ ತನ್ನನ್ನು ಬರಿದುಮಾಡಿಕೊಂಡಾಗ ಅವನ ದೀನತೆ ಮತ್ತು ಭಕ್ತಿಯ ಉತ್ಸಾಹದಿಂದ ಅವಳು ಬೇಸರ ಗೊಂಡಳು (2 ಸಮುವೇಲ 6:20).

ಒಂದು ತಪ್ಪು ಅವಳ ಪ್ರೀತಿಯನ್ನು ದ್ವೇಷಕ್ಕೆ ತಿರುಗಿಸಿತು ಇಂದು ಅನೇಕ ವಿವಾಹ ಗಳಲ್ಲಿ, ಗೊಂದಲ ಮತ್ತು ದ್ವೇಷಕ್ಕೆ ಕಾರಣವಾಗಿದೆ! ಯಾವ ಮನೆಗಳಲ್ಲಿ ಆನಂದ ಆಳಬೇಕಾಗಿದಿಯೋ, ಅಲ್ಲಿ ಕಹಿಯಾದ ಸತ್ವಪರೀಕ್ಷೆಯಿಂದ ತುಂಬಿದೆ. ಯಾಕೆಂದರೆ ದಂಪತಿಗಳಲ್ಲಿ ಒಬ್ಬರು ಇನ್ನೊಬ್ಬರಿಗಿಂತ ದೇವರನ್ನು ಹೆಚ್ಚು ಪ್ರೀತಿಸುತ್ತಾರೆ. ಅಂಥ ಕುಟುಂಬಗಳಲ್ಲಿ ಇನ್ನೂ ಹೆಚ್ಚು ದುಃಖದ ವಿಷಯವೆಂದರೆ, ಇಬ್ಬರೂ, ಪರಸ್ಪರ ಪ್ರೀತಿಗೆ ವಾಗ್ದಾನ ಮಾಡಿಕೊಂಡವರು! ಆದರೆ ದೇವರ ಮೇಲೆ ಆಳವಾದ ನಂಬಿಕೆ ಮತ್ತು ಪ್ರೀತಿ ಯಿಂದ ಪ್ರಾರಂಭಿಸಿ, ನಿಧಾನವಾಗಿ "ಸಮಾಧಾನ"ವೆಂದು ಕರೆಯಲ್ಪಡುವ ವಿಷಯಗಳಿಗೆ ತಮ್ಮ ಮನೋನಿಶ್ಚಯವನ್ನು ಅಧೀನ ಮಾಡುತ್ತಾರೆ. ಆದರೆ ಅದು ಹೆಚ್ಚಿನ ಗೊಂದಲಕ್ಕೆ ನಡೆಸುತ್ತದೆ!

ಜೀವನಪರ್ಯಂತ ಎರಡು ಆತ್ಮಗಳನ್ನು ಬಂಧಿಸುವ ಎಂದಿಗೂ ಹಿಂತೆಗೆಯಲಾರದ ಹೆಜ್ಜೆಗಳನ್ನು ಇಡುವದಕ್ಕಿಂತ ಮುಂಚೆ, ದಾಂಪತ್ಯ ಜೀವನದ ಗಂಭೀರ ಹೆಜ್ಜೆಯನ್ನು ಇಡುವದಕ್ಕೆ ಆಲೋಚಿಸುತ್ತಿರುವ ಪ್ರತಿಯೊಬ್ಬರೂ, ಈ ಅಂಶದ ಕುರಿತು ಎಚ್ಚರ ವಹಿಸಬೇಕು!

## ಪರಿಣಾಮಗಳು

ಧಾರ್ಮಿಕವಾಗಿ ವಿಭಜಿತವಾದ ಕುಟುಂಬದ ದುಃಖಕರವಾದ ಕತೆಯನ್ನು ಇದು ಸ್ಪಷ್ಟವಾಗಿ ಹೇಳುತ್ತದೆ. ವೈವಾಹಿಕ ಬಂದನಗಳು ಇಬ್ಭಾಗವಾಗುವಾಗ ಆಗುವ ನಿಖರ ವಾದ

ಪರಿಣಾಮಗಳನ್ನು ಗಮನಿಸಿರಿ ಮತ್ತು ಪತಿ ಪತ್ನಿಯರ ಮಧ್ಯದ ಬಿರುಕು ಅಗಲ ವಾಗುತ್ತದೆ ಮತ್ತು ಶಾಶ್ವತವಾಗಿ ಬೇರೂರುತ್ತದೆ.

*ಹೆಮ್ಮೆಯ ಮತ್ತು ಸೊಕ್ಕಿನ ಭಾವನೆ ಕಂಡು ಬರುತ್ತದೆ.* ಮೀಕಲಳಿಗೆ ರಾಜಜೀವನ ಬೇಕಿತ್ತು; "ಸಾಮಾನ್ಯ ಜನರೊಡನೆ" ಅವಳಿಗೆ ಯಾವ ಸಂಬಂಧ ಬೇಡವಾಗಿತ್ತು. ನಮ್ಮ ಮೌಲ್ಯಗಳ ತೀರ್ಪು ನಮ್ಮ ನಂಬಿಕೆಯೊಡನೆ ಅತೀ ಸಮೀಪದಿಂದ ಜೋಡಿ ಸಲ್ಪಟ್ಟಿದೆ ಎಂದು ಇದು ತೋರಿಸುತ್ತದೆ. ನಂಬಿಕೆಯ ವಿಷಯದಲ್ಲಿ ಇಬ್ಬರು ಒಪ್ಪದೇ ಇರುವಾಗ, ಜೀವನದ ಮೌಲ್ಯಗಳಲ್ಲಿಯೂ ಭಿನ್ನಾಭಿಪ್ರಾಯವುಳ್ಳವರಾಗಿರುತ್ತಾರೆ. ದಾವೀದನು ಸಾಮಾನ್ಯ ಜನರೊಡನೆ ಮುಕ್ತವಾಗಿ ಬಳಕೆ ಮಾಡಿದ್ದರಿಂದ, ಅವನ ಭಕ್ತಿಯು ಮೀಕಲಳ ರಾಣಿಯ ಪ್ರತಿಷ್ಠೆಯ ಮೇಲೆ ಪ್ರಭಾವ ಬೀರಿತ್ತು. ಮೀಕಲಳು ತಾನು "ಸೌಲನ ಮಗಳು" ಎಂದು ತನ್ನನ್ನು ತಿಳುಕೊಂಡಿದ್ದಳು; ಅವಳ ಮೌಲ್ಯಗಳು ಅದರ ಮೇಲೆಯೇ ಆಧಾರಗೊಂಡಿದ್ದವು.

*ಕೊಂಕು ನುಡಿ ಮತ್ತು ನೋವಿನ ಭಾಷೆ ಒಬ್ಬರಿಗೊಬ್ಬರು ಎಸೆಯುತ್ತಾರೆ.* ಉತ್ಸಾವದ ದಿನವು ದಾವೀದನ ಜೀವನದಲ್ಲಿನ ಅತಿ ಸಂತೋಷದ ದಿನವಾಗಿತ್ತು. ತನ್ನ ಮನೆಯನ್ನು "ಆಶೀರ್ವದಿಸಲು" ಅವನು ಹಿಂತಿರುಗಿದ್ದನು (6:20). ಒಂದು ಆನಂದಕರವಾದ ಔತಣವನ್ನು ಅಪೇಕ್ಷಿಸಿ ಅವನು ಒಳಗಡೆ ಬಂದನು, ಆದರೆ ಅವನು ನೇರವಾಗಿ "ಹುಳುವಿನ ಗೂಡಿಗೆ" ಕಾಲಿಟ್ಟನು! ಅವನನ್ನು ಆಹ್ವಾನಿಸಿದ ಮೊದಲ ಮಾತುಗಳು ವ್ಯಂಗ್ಯವಾಗಿಯೂ ಮತ್ತು ಹಾಸ್ಯಸ್ಪದವಾಗಿಯೂ ಇದ್ದವು. "ಈ ಹೊತ್ತು ಇಸ್ರಾಯೇಲ್ಯರ ಅರಸನು ಎಂಥ ಗೌರವದಿಂದ ನಡಕೊಂಡನು! ನೀಚರ ಲ್ಲೊಬ್ಬನಂತೆ ತನ್ನ ಜನರ ದಾಸಿಯರ ಮುಂದೆ ಬೆತ್ತಲೆಯಾಗಿದ್ದನಲ್ಲಾ" ಎಂದು ಮೀಕ ಲಳು ಭಾವೊದ್ರೇಕದಿಂದ ನುಡಿದಳು (2 ಸಮುವೇಲ 6:20). "ನೀಚ" ಎಂಬ ಚಿಕ್ಕ ಪದವು ಇಬ್ರಿಯರಲ್ಲಿ ದ್ವೇಷವನ್ನು ವ್ಯಕ್ತಪಡಿಸುವ ಪದವಾಗಿದೆ. ಅವಳು ಅವನನ್ನು "ಬರಿದಾದ ಮೂರ್ಕ ತಲೆಯವನು" ಎಂದು ಕರೆದಳು! (ಹೋಲಿಸು ಮತ್ತಾಯ 5:22). ಈ ಘಟನೆಯ ಸಮಯದಲ್ಲಿ ಬಹುಶಃ ದಾವೀದನು ಕೀರ್ತನೆ 52:2, 57:4 ಅಥವಾ 120:3 ಬರೆ ಯುವದಕ್ಕೆ ಒಳನೋಟವನ್ನು ಪಡೆದಿರಬಹುದು. ದಾವೀದನು "ಬೆತ್ತಲೆಯಾಗಿದ್ದನೆಂದು" ಮೀ ಕಲಳು ಆರೋಪಿಸಿದಳು. ಆದರೆ ದಾವೀದನು ಮಾಡಿದ್ದು ಇಷ್ಟೆ - ತನ್ನ ರಾಜ ವಸ್ತ್ರಗಳನ್ನು ತೆಗೆದುಬಿಟ್ಟು ಸಾಮಾನ್ಯ ಜನರಂತಾದದ್ದು. ದಾವೀದ ಮೀಕಲಳಂತೆ ವ್ಯಂಗ್ಯ ಮತ್ತು ಕಠಿಣ ವಾದ ಮಾತುಗಳು ದಂಪತಿಗಳ ಮಧ್ಯದಲ್ಲಿ ತೋರಿ ಬರುವದು ದುಃಖಕರವಾಗಿದೆ.

*ಅಲ್ಲಿ ಅರ್ಥಮಾಡಿಕೊಳ್ಳದಿರುವದು, ದ್ವೇಷ ಮತ್ತು ಕೊನೆಯ ಬೇರ್ಪಡುವಿಕೆ ಇರುತ್ತದೆ.* ದಾವೀದನಂತೆ ದೇವರನ್ನು ಪ್ರೀತಿಸುವದರಲ್ಲಿ ವಿಫಲಳಾದ ಮೀಕಲಳಿಗೆ ದೇವರ ಆರಾ ಧನೆಯ ನಿಜವಾದ ಉತ್ಸಾಹದ ಅರಿವಿರಲಿಲ್ಲ. ಅವಳು ಅವನನ್ನು "ಹಗೆ" ಮಾಡಿದಳು (6:16), ಅದು ಅವಳಲ್ಲಿನ ಆಳವಾದ ದ್ವೇಷವನ್ನು ತೋರಿಸಿತು. ಒಬ್ಬ ಪತಿ ಅಥವಾ ಪತ್ನಿಯಿಂದ ಅನೇಕ ಕ್ರೈಸ್ತರು ಆತ್ಮಿಕವಾಗಿ ಹೀನೈಸಲ್ಪಟ್ಟಿದ್ದಾರೆ. ಅವರ ನಂಬಿಕೆಯಲ್ಲಿನ ವ್ಯತ್ಯಾಸವು ಬಹು ದೊಡ್ಡದಾಗಿ ದಾಂಪತ್ಯ ಜೀವನದಲ್ಲಿನ ತಡೆಯನ್ನು ನಿವಾರಿಸುವಲ್ಲಿ ವಿಫಲವಾಗಿದೆ. ದೇವರು ಮತ್ತು ಪತಿ ಅಥವಾ ಪತ್ನಿಯೊಂದಿಗೆ ಸಮಾಧಾನ, ಅಥವಾ ದೇವರೊಂದಿಗೆ ಸಮಾಧಾನ ಮತ್ತು ಪತಿ ಅಥವಾ ಪತ್ನಿಯಿಂದ ಬೇರ್ಪಡುವಿಕೆಯ ಮಧ್ಯ ಹೊಂದಾಣಿಕೆ ಮಾಡಿಕೊಳ್ಳುವ ನಿರ್ಧಾರ ತೆಗೆದುಕೊಳ್ಳಬೇಕು.

ದಾವೀದ ಮತ್ತು ಮೀಕಲಳಂತ ಅನೇಕ ವಿವಾಹಗಳಲ್ಲಿ, ಬಿರುಕುಗಳು ದಾಟಿಹೋಗ ಲಾರದಷ್ಟು ಬಹು ದೊಡ್ಡದಾಗಿರುತ್ತವೆ ಮತ್ತು ವೇದನೆಗಳು ಗುಣವಾಗದಷ್ಟು ಅಸಾಧ್ಯ ವಾಗಿರುತ್ತವೆ. ಬೇರ್ಪಡುವಿಕೆ ಪರಿಣಾಮವಾಗುತ್ತದೆ.

## ಮುಕ್ತಾಯ

"ದೇವರ ಹೃದಯಕ್ಕೆ ಒಪ್ಪುವ ವ್ಯಕ್ತಿ" ಮೀಕಲಳಾಗಿದ್ದರೆ ಬೇರೆ ರೀತಿಯ ಅಂತ್ಯ ಬರೆ

ಯಲ್ಪಡುತ್ತಿತ್ತು. ಅವಳು ಮತ್ತು ದಾವೀದ, ಪತಿ ಪತ್ನಿಯಾಗಿ ಜೀವಿಸುವದನ್ನು ನಿಲ್ಲಿಸಿಬಿಟ್ಟಿದ್ದರು. ಮತ್ತು ಅವರ ಈ ಬೇರ್ಪಡುವಿಕೆ ಬಹು ಸ್ಪಷ್ಟವಾಗಿ ಕಂಡುಬಂತು (2 ಸಮುವೇಲ 6:23) ಅವಳಿಗೆ ಐದು ಮಕ್ಕಳಿದ್ದರು ಎಂದು 2 ಸಮುವೇಲ 21:8 (KJV) ಯಲ್ಲಿ ಸಮೂದಿಸಲಾಗಿದೆ, ಆದರೆ ಅವರು ಬಹುಶಃ ಮೇರಬಳ ಮಕ್ಕಳು, ಮೀಕಲ ಳದಲ್ಲ. ಮೀಕಲಳು ತನ್ನ ಸಹೋದರಿಯ ಮಕ್ಕಳನ್ನು ಬೆಳೆಸಿದಳು.

ಒಂದು ಕಾಲದಲ್ಲಿ ಕೋಮಲವಾದ ಪ್ರೇಮವು ಹೇಗೆ ದುರಂತದಲ್ಲಿ ಅಂತ್ಯವಾಯಿತು. ಇಂದು ಅನೇಕರು ಅದೇ ಮಾರ್ಗದಲ್ಲಿ ಹೋಗುತ್ತಿರುವದನ್ನು ನೋಡುವುದು ಎಷ್ಟು ದುರದೃಷ್ಟಕರವಾಗಿದೆ!

ಈ ಪ್ರೇಮವು ದುರಂತದಲ್ಲಿ ಅಂತ್ಯವಾಗುವದಕ್ಕೆ ಕಾರಣ ಇಬ್ಬರು ವ್ಯಕ್ತಿಗಳು ನಂಬಿಕೆಯಲ್ಲಿ ಸಮಾನತೆಯಿಲ್ಲದೇ ಜೀವಿಸಿದರು. ಅವರ ದಾಂಪತ್ಯ ಜೀವನವನ್ನು ಈ ಮಾತುಗಳು ವಿವರಿಸುತ್ತವೆ: ಕ್ಷಮೆಯಿಲ್ಲದಿರುವದು, ಸ್ವಾರ್ಥಮಯ, ಹೆಮ್ಮೆ, ಹರಿತ ನಾಲಿಗೆ, ವ್ಯಂಗ, ದ್ವೇಷ ಮತ್ತು ಸಹನೆಯಿಲ್ಲದಿರುವದು.

ದೇವರ ವಾಕ್ಯವನ್ನು ಅಧ್ಯಯನ ಮಾಡುವ ಪ್ರತಿಯೊಬ್ಬ ವಿದ್ಯಾರ್ಥಿಯು, ಕುಟುಂಬವು ನಂಬಿಕೆಯಲ್ಲಿ ಐಕ್ಯತೆಯಿಂದಿರುವದು ಎಷ್ಟು ಪ್ರಾಮುಖ್ಯವೆಂದು ಗಂಭೀರವಾಗಿ ಪರಿಗಣಿಸಬೇಕು. ದಾವೀದ ಮತ್ತು ಮೀಕಲಳು ಅನುಭವಿಸಿದ ದುಃಖಕರವಾದ ದಾಂಪತ್ಯ ಜೀವನವನ್ನು ತಪ್ಪಿಸಲು, ನಮ್ಮ ಯೌವನಸ್ಥರಿಗೆ ಕ್ರೈಸ್ತರನ್ನೇ ಪ್ರೇಮಿಸಿ ಮದುವೆ ಮಾಡಿಕೊಳ್ಳಬೇಕೆಂದು ಒತ್ತಾಯಿಸಬೇಕು! ಈ ದುರಂತವು ಅವರ ಮನೆಗಳಲ್ಲಿ ಪುನರಾವರ್ತಿಸದಂತೆ ತಿಳುವಳಿಕೆಯನ್ನು ನಮ್ಮ ಯೌವನಸ್ಥರಲ್ಲಿ ಹಾಕೋಣ.